ಕರ್ನಾಟಕ ಸರ್ಕಾರ | ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.05/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸೈಯದ್ ವಾಹಿದ್ ಪಾಷಾ** | | |
| **ತಂದೆಃಹೆಸರು** | **ಸೈಯದ್ ಮೆಹಬೂಬ್ ಪಾಷಾ** | **ಪಿಡಬ್ಲ್ಯೂಃ** | **1** |
| **ವಯಸ್ಸು** | **38 ವರ್ಷ** | **ಸಿಡಬ್ಲ್ಯೂಃ** | |
| **ಉದ್ಯೋಗಃ** | **ಎಲೆಕ್ಟ್ರೀಷಿಯನ್** | | |
| **ವಾಸ ಸ್ಥಳಃ** | **ಖದರಿಯಾ ಕಾಲೋನಿ, ಸಿಂಧನೂರು.** | | |

**ದಿನಾಂಕ 12-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-2 ರಿಂದ 5 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ನಾನು ಎಲೆಕ್ಟ್ರೀಷಿಯನ್ ಆಗಿದ್ದು, ಫ್ಯಾನ್, ಮೋಟಾರ್ ರಿಪೇರಿ ಮಾಡುತ್ತೇನೆ, ಸಿಂಧನೂರು-ರಾಯಚೂರು ರಸ್ತೆಯಲ್ಲಿ ನನ್ನ ಅಂಗಡಿ ಇದೆ.

ದಿ.10-06-2021 ರಂದು ಬೆ.11 ಗಂಟೆಯ ಸುಮಾರಿಗೆ ಆರೋಪಿ ತನ್ನ ಸೀಲಿಂಗ್ ಫ್ಯಾನ್ ರಿಪೇರಿ ಗೆಂದು ತಂದುಕೊಟ್ಟು, ರಿಪೇರಿ ಮಾಡಿಸಿಕೊಂಡು ಹೋಗಿದ್ದರು. ಆಗ ನಾನು ಅವರಿಗೆ ಹಣ ಕೊಡುವಂತೆ ಕೇಳಿದಾಗ ನಂತರ ಕೊಡುತ್ತೇನೆಂದು ಹೇಳಿ ಹೋಗಿದ್ದರು. ನಂತರ ನಾನು 2-3 ಬಾರಿ, ಆಗಾಗ್ಗೆ ಹಣ ಕೊಡುವಂತೆ ಕೇಳಿದ್ದೆ ಆಗ ಕೊಡುತ್ತೇನೆಂದು ನೆಪ ಹೇಳಿದ್ದನು. ದಿ.14-06-2021 ರಂದು ಬೆ.9 ಗಂಟೆಯ ಸುಮಾರಿಗೆ ನಾನು ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿ ಅಲ್ಲಿಗೆ ಬಂದಾಗ ಆತನ ಬಳಿ ಆತ ಕೊಡಬೇಕಾದ ರಿಪೇರಿ ಹಣವನ್ನು ಕೊಡುವಂತೆ ಕೇಳಿದೆ. ಆಗ ಆರೋಪಿ ಸೂಳೆ ಮಗನೆ ನೀನು ನನಗೆ ರೊಕ್ಕ ಕೇಳುತ್ತೀಯಾ ಎಂದು ಅವಾಚ್ಯವಾಗಿ ಬೈದನು. ಆಗ ಅಂಗಡಿಯಲ್ಲಿದ್ದ ಪೈಪ್ ರಿಂಚ್ ತೆಗೆದುಕೊಂಡು ನನ್ನ ತಲೆಯ ಬಲಭಾಗಕ್ಕೆ ಹೊಡೆದ. ಆಗ ಚಾಸಾ-4

& 5 ರವರು ಜಗಳ ಬಿಡಿಸಿಕೊಂಡರು.  ಆರೋಪಿ ಇನ್ನೊಮ್ಮೆ ನನ್ನನ್ನು ರೊಕ್ಕ ಕೊಡುವಂತೆ ಕೇಳಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ, ಮುಗಿಸಿಬಿಡುತ್ತೇನೆ ಎಂದು ನನಗೆ ಬೆದರಿಕೆ ಹಾಕಿದನು.

ನಂತರ ನಾನು ಠಾಣೆಗೆ ಹೋಗಿದ್ದೆ, ಆಗ ಪೋಲೀಸರು ನನಗೆ ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುವಂತೆ ಹೇಳಿ ಕಳಿಸಿದ್ದರು. ನಾನು ಸಿ.ಸ.ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು 2 ದಿನ ಒಳರೋಗಿಯಾಗಿ ಇದ್ದೆ.

ನಂತರ ದಿ.19-06-2021 ರಂದು ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಮರುದಿನ ದಿ.20-06-2021 ರಂದು ಪೋಲೀಸರು ಸ್ಥಳಕ್ಕೆ ಬಂದು ಮ.12 ರಿಂದ 1 ಗಂಟೆಯ ಅವಧಿಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಚಾಸಾ-2 & 3 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ, ಆರೋಪಿ ಕೃತ್ಯಕ್ಕೆ ಬಳಸಿದ ಪೈಪ್ ರಿಂಚನ್ನು ವಶಕ್ಕೆ ಪಡೆದರು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 & 4 ಎಂದು, ಸಾಕ್ಷಿಯು ನ್ಯಾಯಾಲಯದ ಮುಂದಿರುವ ರಿಂಚ್ ಪೈಪನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ನಂತರ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದರು, ನಾನು ಹೇಳಿಕೆ ಕೊಟ್ಟಿದ್ದೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ನೀವು ನಿಮ್ಮ ದೂರಿನಲ್ಲಿ & ಹೇಳಿಕೆಯಲ್ಲಿ ಆರೋಪಿ ನಿಮ್ಮ ಅಂಗಡಿಯೊಳಗೆ ಏಕಾಏಕಿ ನುಗ್ಗಿದ್ದ & ಅತಿಕ್ರಮ ಪ್ರವೇಶ ಮಾಡಿದ್ದ ಎಂದು ಹೇಳಿ ಬರೆಸಿದ್ದಿರಿ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಆರೋಪಿ 5-6 ವರ್ಷಗಳಿಂದ ನನಗೆ ಪರಿಚಯ ಇದ್ದಾನೆ. ಆರೋಪಿಯದ್ದು ನನ್ನ ಅಂಗಡಿಯ ಮೇಲೆ ಟೈಲರ್ ಅಂಗಡಿ ಇದೆ, ಸಣ್ಣ ಪುಟ್ಟ ಕೆಲಸಕ್ಕಾಗಿ ಹೋಗುವುದು ಬರುವುದು ಮಾಡುತ್ತಿದ್ದೆ ಆದ್ದರಿಂದ ಪರಿಚಯ ಇದ್ದಾರೆ. ನನಗೆ

ಒಂದು ಸಲ ಅಪಘಾತವಾಗಿತ್ತು, ಆದರಿಂದ ನನ್ನ, ತಲೆಗೆ, ಕೈಗೆ, ಕಾಲಿಗೆ ಪೆಟ್ಟಾಗಿತ್ತು. ಸದರಿ ಅಪಘಾತದಲ್ಲಿ ನಿಮ್ಮ ಜೊತೆಗಿದ್ದವರಿಗೆ ತೀವ್ರ ತರವಾದ ರಕ್ತಗಾಯಗಳಾಗಿ ಮೃತರಾಗಿದ್ದರು ಎಂದರೆ ಸಾಕ್ಷಿಯು ಮೃತರಾಗಿದ್ದರು ಎಂದು ನನಗೆ 3 ತಿಂಗಳ ನಂತರ ತಿಳಿದಿತ್ತು ಎನ್ನುತ್ತಾರೆ.

2. ಇನ್ನೊಂದು ಸಲ ಶಾಧಿಮಹಲ್ ಹತ್ತಿರವೂ ಸಲ ನಿಮಗೆ ಒಂದು ಬಾರಿ ಅಪಘಾತ ಆಗಿತ್ತು ಎಂದರೆ ಸಾಕ್ಷಿಯು ಎಕ್ಸಲೇಟರ್ ಡೈರೆಕ್ಟ್ ಆಗಿತ್ತು, ನನ್ನ ಬಲಗೈ ಮುರಿದಿತ್ತು ಎನ್ನುತ್ತಾರೆ.

3. ಫ್ಯಾನನ್ನು ರಿಪೇರಿ ಮಾಡಿಸಲು ದಿ.10-06-2021 ರಂದು ಕೊಟ್ಟಿದ್ದರು. ಅದು ಯಾವ ಕಂಪನಿಯದ್ದು ಎಂದು ಗೊತ್ತಾ ಎಂದರೆ ಸಾಕ್ಷಿಯು ಹಳೆಯ ಕಂಪನಿಯದ್ದು ಎನ್ನುತ್ತಾರೆ.

4. ನನ್ನ ಅಂಗಡಿ ಸಧ್ಯ ಖದರಿಯಾ ಕಾಲೋನಿಯಲ್ಲಿದೆ. ಘಟನೆ ನಡೆದಿತ್ತು ಎಂದು ಹೇಳಿದ ಅಂಗಡಿಯ ಮಾಲೀಕರು ಮೌಲಾಸಾಬ್.

5. ಅಬ್ದುಲ್ ಸಮದ್ ರವರ ಮೇಲೆ ನೀವು ಒಂದು ಕೇಸ್ ಹಾಕಿದ್ದಿರಿ, ಅದರ ಸಂ.2417/2021 ಎಂದರೆ ಸಾಕ್ಷಿಯು ಸಧ್ಯ ನನಗೆ ನೆನಪಿಲ್ಲ ಎನ್ನುತ್ತಾರೆ. ಆ ಕೇಸಿನಲ್ಲಿ ನೀವು ನಿಮ್ಮ ಅಂಗಡಿ ಅಬ್ದುಲ್ ಸಮದ್ ರವರ ಕಟ್ಟಡದಲ್ಲಿದೆ ಎಂದು ನಮೂದಿಸಿದ್ದಿರಿ ಎಂದರೆ ಸಾಕ್ಷಿಯು ಸಧ್ಯ ನೆನಪಿಲ್ಲ ಎನ್ನುತ್ತಾರೆ. ಅಬ್ದುಲ್ ಸಮದ್, ಆತನ ಮಗ & ಇತರರು ಸೇರಿ ನಿಮ್ಮ ತಲೆಗೆ ಹೊಡೆದಿದ್ದಾರೆ ಎಂದು ನೀವು ದೂರು ಕೊಟ್ಟಿದ್ದಿರಿ ಎಂದರೆ ಸರಿ. ನೀವು ಸರಿಯಾಗಿ ಬಾಡಿಗೆ ಕೊಡುತ್ತಿಲ್ಲ ಎಂದು ಹೇಳಿ, ನಿಮ್ಮನ್ನು ಅಂಗಡಿಯಿಂದ ಬಿಡಿಸಿದ್ದರಿಂದ, ಸದರಿಯವರು ನಿಮ್ಮ ತಲೆಗೆ ಹೊಡೆದಿದ್ದರು ಎಂದು ದೂರು ಕೊಟ್ಟಿದ್ದಿರಿ ಎಂದರೆ ಸರಿ.

6. ಸದರಿ ಆರೋಪಿ ಅಬ್ದುಲ್ ಸಮದ್ ರವರ ಕೇಸಿನಲ್ಲಿ ನಿಮಗೆ ಸಪೋರ್ಟ್ ಮಾಡಿಲ್ಲ ಎಂದು ಹೇಳಿ, ಈ ಕೇಸನ್ನು ಆರೋಪಿಯ ವಿರುದ್ಧ ಹಾಕಿದ್ದೀರಿ ಎಂದರೆ ಸರಿಯಲ್ಲ.

7. ಚಾಸಾ-4 & 5 ರವರು ನಿಮ್ಮ ಸ್ನೇಹಿತರು ಎಂದರೆ ಸಾಕ್ಷಿಯು ಅವರ ಪರಿಚಯ ಇದೆ ಎನ್ನುತ್ತಾರೆ. ಅವರು ನೀವು ಹೇಳಿದಂತೆ ಕೇಳುತ್ತಾರೆ ಎಂದರೆ ಸರಿಯಲ್ಲ.

8. ಘಟನೆ ಬೆ.9 ಗಂಟೆಗೆ ಆಗಿತ್ತು. ಆ ಕಾಲಕ್ಕೆ ಅಂಗಡಿಯ ಒಳಗೆ ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ಆರೋಪಿಯನ್ನು ಸೇರಿ 4 ಜನ ಇದ್ದೆವು ಎನ್ನುತ್ತಾರೆ. ಆಸ್ಪತ್ರೆಗೆ 10 ಗಂಟೆಗೆ ಹೋಗಿದ್ದೆ.

9. ನಿಪಿ-1 ನ್ನು ನಾನೇ ಹೇಳಿ ಟೈಪ್ ಮಾಡಿಸಿದ್ದೆ. ದಿ.16-07-2021 ರಂದು ಫ್ಯಾನ್ ರಿಪೇರಿಗೆ ಕೊಟ್ಟಿದ್ದರು ಎಂದು ನಿಪಿ-1 ರಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ಟೈಪಿಂಗ್ ಮಿಸ್ಟೇಕ್ ಆಗಿದೆ ಎನ್ನುತ್ತಾರೆ.

10. ಆಸ್ಪತ್ರೆಯಲ್ಲಿ ನನಗೆ ಹೊಲಿಗೆ ಹಾಕಿದ್ದರು, ನನಗೆ ಚಕ್ರ ಬರುತ್ತಿತ್ತು, ಏನು ಚಿಕಿತ್ಸೆ ಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ.

11. ಕೃತ್ಯ ನಡೆದ ಸ್ಥಳದಲ್ಲಿ ನೀವು ಕೆಲಸ ಮಾಡುತ್ತಿದ್ದ ಬಗ್ಗೆ ಅಗ್ರಿಮೆಂಟ್ ಮಾಡಿಸಿದ್ದಿರಾ ಎಂದರೆ ಸಾಕ್ಷಿಯು ಇಲ್ಲ, ಒಂದು ಬುಕ್ಕಿನಲ್ಲಿ ಬರೆದುಕೊಟ್ಟಿದ್ದರು ಎನ್ನುತ್ತಾರೆ. ಸದರಿ ಘಟನಾ ಸ್ಥಳ ಈಗ ನಿಮ್ಮ ಅಂಗಡಿ ಇಲ್ಲ ಎಂದರೆ ಸಾಕ್ಷಿಯು ಘಟನೆ ನಡೆದಾಗ ನನ್ನ ಅಂಗಡಿ ಇತ್ತು ಎನ್ನುತ್ತಾರೆ. ಆಗಲೂ & ಈಗಲೂ ಸಿಖಂಧರ್ ಎನ್ನುವವರು ಅಲ್ಲಿ ಅಂಗಡಿ ನಡೆಸುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಬಿಟ್ಟ ನಂತರ ಅವರು ನಡೆಸುತ್ತಿದ್ದಾರೆ ಎನ್ನುತ್ತಾರೆ. ನಿಮ್ಮ ಅಂಗಡಿಯ ಹೆಸರು ಏನು ಎಂದರೆ ಸಾಕ್ಷಿಯು ಕರ್ನಾಟಕ ರಿವೈಂಡಿಂಗ್ ವರ್ಕ್ಸ್ ಎನ್ನುತ್ತಾರೆ.

12. ಪಂಚನಾಮೆಯನ್ನು ಮ.12 ರಿಂದ 1 ಗಂಟೆಯ ಕಾಲ ಮಾಡಿದ್ದರು. ಪಂಚನಾಮೆಯ ಕಾಲಕ್ಕೆ ಆಸಿಫ್ & ಪರಶುರಾಮ್ ಇದ್ದರು.

13. ಆರೋಪಿ ನಿಮ್ಮ ಅಂಗಡಿಯೊಳಗೆ ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಅಂಗಡಿಯ ಒಳಗಡೆ ಇದ್ದೆ. ಆರೋಪಿ ಬಂದ ತಕ್ಷಣ ನಿಮಗೆ ಬೈಯ್ಯುವುದು, ಹೊಡೆಯುವುದು, ಹೊಡೆಯುವುದು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಕರೆದಿರಲಿಲ್ಲ, ಆತನೇ ಬಂದಿದ್ದನು.

14. ಮು. ಮಾ. 1 ರಂತಹ ಮಾಲು ಎಲ್ಲಾ ಕಡೆಗೆ ಸಿಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮು.ಮಾ. 1 ರಂತಹ ಮಾಲಿನಿಂದ ಹೊಡೆದರೆ ಸತ್ತು ಹೋಗುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನು ಹೇಗೆ ಹೇಳಲಿ ಎನ್ನುತ್ತಾರೆ. ನಿಮಗೆ ರಕ್ತ ಬಂದಿರಲಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಹೊಡೆದಿಲ್ಲ, ನಿಮಗೆ ಅಪಘಾತ ಆಗಿದ್ದರಿಂದ ರಕ್ತ ಬಂದಿತ್ತು ಎಂದರೆ ಸರಿಯಲ್ಲ.

15. ನೀವು ಎಕ್ಸರೇ ಮಾಡಿಸಿ ವೈದ್ಯರಿಂದ ವರದಿ ಪಡೆದಿದ್ದೀರಾ ಎಂದರೆ ಸಾಕ್ಷಿಯು ಎಕ್ಸರೇ ಮಾಡಿಸಿಲ್ಲ, ಸ್ಕ್ಯಾನಿಂಗ್ ಮಾಡಿಸಿದ್ದೆ, ಆದರೆ ಅದರ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಬಟ್ಟೆಯ ಮೇಲೆ ರಕ್ತ ಅಂಟಿತ್ತು, ರಕ್ತ ಹತ್ತಿದ ಬಟ್ಟೆಯನ್ನು ಪೋಲೀಸರಿಗೆ ಕೊಟ್ಟಿರಲಿಲ್ಲ.

16. ಘಟನೆಯಾದ ದಿನವೇ ದೂರು ಏಕೆ ಕೊಡಲಿಲ್ಲ ಎಂದರೆ ಸಾಕ್ಷಿಯು ನಾನು ಠಾಣೆಗೆ ಹೋಗಿದ್ದೆ, ನನಗೆ ಗಾಯವಾದ ಕಾರಣ ಪಿ ಎಸ್ ಐ ರವರು ಚಿಕಿತ್ಸೆ ಪಡೆಯಲು ಹೇಳಿ ಕಳಿಸಿದ್ದರು ಎನ್ನುತ್ತಾರೆ. ದೂರಿನಲ್ಲಿ & ಹೇಳಿಕೆಯಲ್ಲಿ ಘಟನೆ ನಡೆದ ದಿನಾಂಕಗಳು ವ್ಯತ್ಯಾಸ ಇವೆ ಎಂದರೆ ಸರಿಯಲ್ಲ.

17. ದಿ.18-06-2021 ರಂದು ನಾನು ದೂರು ಕೊಡಲು ಹೋಗಿದ್ದೆ, ನಾಳೆ ಬಾ ಎಂದು ಹೇಳಿದ್ದರು ಎನ್ನುತ್ತಾರೆ. ದೂರು ಕೊಡುವ ಮೊದಲು ಯಾರನ್ನೂ ಸಲಹೆ ಕೇಳಿರುವುದಿಲ್ಲ.

18. ನನ್ನ & ಆರೋಪಿಯ ನಡುವೆ ಮೊದಲು ಯಾವುದೇ ಜಗಳ ಇರಲಿಲ್ಲ.

19. ಘಟನಾ ಸ್ಥಳದ ಚೆಕ್ ಬಂದಿ ಹೇಳುತ್ತೇನೆ, ಪೂರ್ವಕ್ಕೆ ಆದಿಶೇಷ್ ನ ಗುಡಿ, ಪಶ್ಚಿಮಕ್ಕೆ ಸನಾ ಜ್ಯುವೆಲರ್ಸ್, ಉತ್ತರಕ್ಕೆ ನನ್ನ ಅಂಗಡಿ, ದಕ್ಷಿಣಕ್ಕೆ 6 ಅಡಿ ರಸ್ತೆ ಇದೆ, ಅದರ ನಂತರ ಒಂದು ಬಟ್ಟೆ ಅಂಗಡಿ ಇದೆ. ನಿಮ್ಮ ಹೇಳಿಕೆಯಲ್ಲಿ ಕಬ್ಬಿಣದ ರಾಡ್ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಪೈಪ್ ಗಿಂಚ್‌ನಿಂದ ಹೊಡೆದಿರುತ್ತಾನೆ ಎಂದು ನಾನು ಪೋಲೀಸರಿಗೆ ಹೇಳಿದ್ದೆ, ಆದರೆ ಅವರು ಏನು ತಪ್ಪು ಮಾಡಿರುತ್ತಾರೋ ಎನ್ನುತ್ತಾರೆ.

20. ನಿಪಿ-1 ರಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತು, ನಾನೇ ಹೇಳಿ ಬರೆಸಿದ್ದೆ. ನನ್ನ ಹೇಳಿಕೆಯನ್ನು ಪೋಲೀಸರ ಮುಂದೆ ಕೊಟ್ಟಿದ್ದೆ.

21. ಆಸ್ಪತ್ರೆಗೆ ನನ್ನೊಂದಿಗೆ ಚಾಸಾ-4 & 5 ರವರು ಬಂದಿದ್ದರು. ಆಸ್ಪತ್ರೆಯಲ್ಲಿ 2 ದಿನ ಇದ್ದೆ.

22. ನಿಮ್ಮ ಅಂಗಡಿ ಆದಿಶೇಷನ ಗುಡಿಯ ಹತ್ತಿರ ಯಾವತ್ತೂ ಇಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

23. ಫ್ಯಾನ್ ರಿಪೇರಿ ಮಾಡಿಕೊಟ್ಟ ಬಗ್ಗೆ ಬಿಲ್ ಕೊಟ್ಟಿದ್ದಿರಾ ಎಂದರೆ ಸಾಕ್ಷಿಯು ನಾವು ಕೈ ಕೆಲಸ ಮಾಡಿದ್ದೆವು, ಆದ್ದರಿಂದ ಬಿಲ್ ಕೊಡುವುದಿಲ್ಲ ಎನ್ನುತ್ತಾರೆ.

24. ಅಬ್ದುಲ್ ಸಮದ್ ರವರ ಪ್ರಕರಣದಲ್ಲಿ ನಿಮಗೆ ಸಹಾಯ ಮಾಡಿಲ್ಲ ಎಂದು ಹೇಳಿ ಈ ರೀತಿ ಸುಳ್ಳು ಪ್ರಕರಣ ಹಾಕಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಹೊಡೆದಿಲ್ಲ, ಬೈದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**